ಮೈಸೂರಿನಲ್ಲಿ ನಿರ್ಮಾಣವಾದ ಕನ್ನಡ ಕಲಾಮಂದಿರ

೧೬೭೧. ಶ್ರೀ ಬಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ). ಮಾನ್ಯ ವಾರ್ತಾ ಪ್ರಚಾರೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಹುಣಸೂರು ರಸ್ತೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ಮಂದರ್ಭಕ್ಕೆ ಕನ್ನಡ ಕಲಾ ಮಂದಿರವನ್ನು ನಿರ್ಮಾಣಮಾಡಲುದ್ದೇಶವೆನು ?

ಆ) ಆ ಉದ್ದೇಶಕ್ಕೆ ತಕ್ಕ ಹಾಗೆ ಕಲಾಮಂದಿರದ ಬಳಕೆ ಆಗಲಿತ್ತಿದೆಯೇ ?

ಇ) ಈ ಕಲಾ ಮಂದಿರ ಲಾಭಕಾರಿ ಆಗಿಲ್ಲವೆಂದೂ ಪಾಸಗಿ ಚಲನ ಚಿತ್ರ ರಂಗದ ಕೆಲವರಿಗೆ ಶಬ್ದ ಗ್ರಹಣ ಮಂಮಂತಾದ ವಾಣಿಜ್ಯ ಕಾರ್ಯಗಳಿಗೆ ಗುತ್ತಿಗೆಗೆ ಕೊಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರಚಾರೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು).—

ಅ) ಮೈಸೂರು ನಗರದ ಸಾಂಸ್ಕೃತಿಕ ಮತ್ತು ರಂಗಚಟುವಟಿಕೆಗಳಿಗೆ ಅವಕಾಶ ನೀಡುವುದು

ಆ) ಹೌದು.

ಇ) ಇಲ್ಲ.

ಶ್ರೀ ಬಿ. ಎಂ. ಚಿಕ್ಕ ಬೋರಯ್ಯ.—ಅಧ್ಯಕ್ಷರೆ, ಕಲಾಮಂದಿರಕ್ಕೆ ಆಟ್ಯಾಚ್ ಮಾಡಿರುವಷ್ಟು ಜನರಲ್ ಕ್ವಾರ್ಟರ್ಸ್ ಏನಿವೆ, ಅದನ್ನು ಪಾಸಗಿ ಚಲನಚಿತ್ರ ರಂಗದ ಕೆಲವರಿಗೆ ಕೊಟ್ಟಿರುವುದು ನಿಜವೆ? ಅದರಲ್ಲಿಯೂ ಕೂಡ ವಿರಕಂಡಿಶನ್ಡ್ ಜನರಲ್ ಕ್ವಾರ್ಟರ್ಸ್ ಎಷ್ಟಿದೆ ? ಅದನ್ನು ಹೀಗೆ ಪಾಸಗೀಯವರಿಗೆ ಕೊಟ್ಟಿರುವುದು ನಿಜವೆ ? ಕಲಾಮಂದಿರಕ್ಕೆ ಸೇರಿದ ಕಟ್ಟಡಗಳಲ್ಲಿ ವಿಶ್ವ ಕನ್ನಡ ಸಾಂಸ್ಕೃತಿಕ ಕೇಂದ್ರವನ್ನು ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಅದು ಇನ್ನೂ ಕಾರ್ಯಗತವಾಗಿಲ್ಲ ಇನ್ನೂ ಮೇಲಾದರೂ ಮಾಡಲಿಕ್ಕೆ ಪ್ರಯತ್ನ ಮತ್ತು ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರು ಕೇಳಿದ ವಿವರ ಈ ಪ್ರಶ್ನೆಗೆ ನೇರವಾಗಿ ಸಂಬಂಧ ಪಟ್ಟಿದ್ದದ್ದು ಅಲ್ಲ ಅವರು ಪ್ರಶ್ನೆ ಕೇಳಿರತಕ್ಕ ಧಾಟಿಯಲ್ಲಿ ಕಲಾ ಮಂದಿರದ ಬಗ್ಗೆ. ಯಾವುದೇ ಕಾರ್ಯಕ್ರಮಕ್ಕೆ ಅಲ್ಲಿರತಕ್ಕಂಥ ಕಟ್ಟಡಗಳು ಇವೆ, ಅವುಗಳ ಕಲಾಮಂದಿರಕ್ಕೆ ಸಂಬಂಧ ಪಟ್ಟಿದ್ದಲ್ಲ. ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಆ ಕಟ್ಟಡಗಳನ್ನು ಹೇರೆ ಬೇರೆಯವರಿಗೆ ಬಾಡಿಗೆಗೆ ಕೊಟ್ಟಿರುವುದು. ಈಗಲೂ ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದೆ. ಹೀಗೆ ಬಾಡಿಗೆಗೆ ತೆಗೆದುಕೊಂಡವರಲ್ಲಿ ಚಲನ ಚಿತ್ರರಂಗದವರು ಇದ್ದಿರಬಹುದು. ಹಾಗೆಯೇ ಅನೇಕ ಸಂಘಸಂಸ್ಥೆಗಳಲ್ಲಿ ಬೇರೆಯವರು ಕೂಡ ಬಾಡಿಗೆಗೆ ತೆಗೆದುಕೊಂಡಿದ್ದಾರೆ. ವಿಶ್ವಕಲಾ ಕೇಂದ್ರವನ್ನು ಸ್ಥಾಪಿಸುವ ಆಶ್ವಾಸನೆಯನ್ನು ಕೊಟ್ಟಿಲ್ಲ. ಹಾಗೆಯೇ ಆ ಕಾರಿತು ಯೋಜನೆಯೂ ಕೂಡ ಸರಕಾರದ ಮುಂದೆ ಇಲ್ಲ.

ಮೈಸೂರು ನಗರಪಾಲಿಕೆಯಲ್ಲಿ ಆರೋಗ್ಯ ಇನ್ಸ್‌ಪೆಕ್ಟರ್‌ಗಳು

೧೫೩೦. ಶ್ರೀ ಬೇದಾಂತ ಹೆಬ್ಬಿಗೆ (ಕೃಷ್ಣರಾಜ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಮೈಸೂರು ನಗರಪಾಲಿಕೆಯಲ್ಲಿ ಎಷ್ಟು ಮಂದಿ ಹಿರಿಯ ಮತ್ತು ಕಿರಿಯ ಆರೋಗ್ಯ ಇನ್ಸ್‌ಪೆಕ್ಟರ್‌ಗಳಿದ್ದಾರೆ ?

೨) ಇವರುಗಳು ಮೈಸೂರು ನಗರಪಾಲಿಕೆಯಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ?

೩) ಇವರುಗಳು ಒಂದು ಬಾರಿ ವರ್ಗವಾಗಿ ಮತ್ತೆ ಅದೇ ಸ್ಥಳಕ್ಕೆ ವರ್ಗ ಮಾಡಿಸಿಕೊಂಡು ಬಂದವರ ಸಂಖ್ಯೆ ಎಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು). —

೧) ಹಿರಿಯ ಆರೋಗ್ಯ ಇನ್ಸ್‌ಪೆಕ್ಟರುಗಳು — ೬
ಕಿರಿಯ ಆರೋಗ್ಯ ಇನ್ಸ್‌ಪೆಕ್ಟರುಗಳು — ೨೪

೨) ವಿವರವಾದ ತಃಪ್ತಿಯನ್ನು ಲಗತ್ತಿಸಿದೆ.

೩) ಹಿರಿಯ ಆರೋಗ್ಯ ಇನ್ಸ್‌ಪೆಕ್ಟರುಗಳು — ೨
ಕಿರಿಯ ಆರೋಗ್ಯ ಇನ್ಸ್‌ಪೆಕ್ಟರುಗಳು — ೪

ತಃಪ್ತಿ

ಕ್ರಮ ಸಂಖ್ಯೆ	ಆರೋಗ್ಯ ಪರಿವೀಕ್ಷಕರ ಹೆಸರುಗಳು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಎರವಲು ಸೇವೆಯ ಮೇಲೆ ನಗರ ಪಾಲಿಕೆಯಲ್ಲಿ ಕೆಲಸ ಮಾಡುತ್ತಿರುವ ದಿನಾಂಕ	ನೌಕರರು ನಗರ ಪಾಲಿಕೆಯಲ್ಲಿ ಎಷ್ಟನೇ ಬಾರಿ ಕೆಲಸ ಮಾಡುತ್ತಿರುವುದು
೧	೨	೩	೪
	ಹಿರಿಯ ಆರೋಗ್ಯ ಪರಿವೀಕ್ಷಕರು		
೧	ಶ್ರೀ ಜೆ. ಮಲ್ಲಿಕಾರ್ಜುನಸ್ವಾಮಿ	೩-೬-೮೫	ಮೊದಲನೇ ಬಾರಿ
೨	ಶ್ರೀ ಜೆ. ವಿ. ಶಕಾದ್ರಿ	೭-೮-೮೪	,,
೩	ಶ್ರೀ ಸಿ. ದೊಡ್ಡೇಗೌಡ	೨೫-೧೦-೮೫	ಎರಡನೇ ಬಾರಿ
೪	ಶ್ರೀ ಡಿ. ಆರ್. ರಾಮಣ್ಣ	೭-೪-೮೪	ಮೊದಲನೇ ಬಾರಿ
೫	ಶ್ರೀ ಎಂ. ಬಿ. ಆನಂದಕುಮಾರ್	೧೯-೯-೮೫	ಮೊದಲನೇ ಬಾರಿ
೬	ಶ್ರೀ ಜಿ. ಚಿಕ್ಕಣ್ಣ	೨೧-೯-೮೫	ಎರಡನೇ ಬಾರಿ
೭			
	ಕಿರಿಯ ಆರೋಗ್ಯ ಪರಿವೀಕ್ಷಕರು		
೧	ಶ್ರೀ ನಾಗರಾಜರಾವ್	೩-೫-೮೫	ಎರಡನೇ ಬಾರಿ
೨	ಶ್ರೀ ಸದಾಶಿವರಾವ್	೩೦-೧೦-೮೫	ಮೊದಲನೇ ಬಾರಿ
೩	ಶ್ರೀ ಬಿ. ಎಸ್. ರಾಮಸ್ವಾಮಿ	೨೬-೭-೮೫	,,
೪	ಶ್ರೀ ಸಿದ್ದಾಚಾರ್	೧೮-೪-೮೫	,,
೫	ಶ್ರೀ ಹನುಮಂತಯ್ಯ	೨೩-೫-೮೫	,,
೬	ಶ್ರೀ ಎಂ. ಮಲ್ಲಿಕಾರ್ಜುನ	೧೪-೪-೮೫	,,
೭	ಶ್ರೀ ಎನ್ ಆನಂದಮೂರ್ತಿ	೩೧-೧೦-೮೫	,,

೧	೨	೩	೪
೮	ಶ್ರೀ ಡಿ. ಟಿ. ಪುಟ್ಟಸ್ವಾಮಿ	೨೨-೨-೮೪	ಎರಡನೇ ಬಾರಿ
೯	ಶ್ರೀ ಎನ್. ಕೃಷ್ಣಪಿಳ್ಳೆ	೫-೭-೮೬	ಮೊದಲನೇ ಬಾರಿ
೧೦	ಶ್ರೀ ಸಿ. ಎಸ್. ನಾರಾಯಣರಾವ್	೫-೭-೮೬	,,
೧೧	ಶ್ರೀ ಕೆ. ಸಿ. ನಟರಾಜು	೨೭-೬-೮೭	,,
೧೨	ಶ್ರೀ ಸಂಬ್ಬರತ್ನ	೨೬-೬-೮೭	ಎರಡನೇ ಬಾರಿ
೧೩	ಶ್ರೀ ಕೃಷ್ಣ	೫-೬-೮೬	ಮೊದಲನೇ ಬಾರಿ
೧೪	ಶ್ರೀ ಟಿ. ನಾಗರಾಜಯ್ಯ	೫-೭-೮೬	,,
೧೫	ಶ್ರೀ ಸಿ. ಕೆ. ಈರೇಗೌಡ	೫-೭-೮೬	,,
೧೬	ಶ್ರೀ ಪಜಲೂರ್ ರೆಹಮಾನ್	೫-೭-೮೬	,,
೧೭	ವೆಂಕಟೇಶಯ್ಯ	೮-೫-೮೭	ಎರಡನೇ ಬಾರಿ

ಶ್ರೀ ವೇದಾಂತ ಹೆಬ್ಬಿಗೆ.— ಮಾನ್ಯ ಅಧ್ಯಕ್ಷರೆ, ಮೈಸೂರು ನಗರಪಾಲಿಕೆಯಲ್ಲಿ ಆರೋಗ್ಯ ಸೇವಾ ಇಲಾಖೆಯಲ್ಲಿ ಯಾರು ಜೂನಿಯರ್ ಮತ್ತು ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ಸ್ ಇದ್ದಾರೆ ಅವರು ಆಲ್ಲಿರತಕ್ಕಂಥ ೯೭೦ ಪೌರ ಕಾರ್ಮಿಕರು ಏನಿದ್ದಾರೆ ಅವರ ರಕ್ತವನ್ನು ಹೀರತಕ್ಕಂಥಹವರು ಆಗಿದ್ದಾರೆ. ಅವರು ಸಂಬಳ ತೆಗೆದುಕೆ ಸಳ್ಳುವಾಗ, ಅಟೆಂಡೆನ್ಸ್ ಕೊಡುವಾಗ ಮತ್ತು ಡ್ಯೂಟಿಗೆ ಬರದೇ ಇದ್ದಾಗ ಬಂದಿದ್ದಾರೆ ಎಂದು ಹೇಳಿ ಅಟೆಂಡೆನ್ಸ್ ಕೊಡುವಾಗ ಪೌರ ಕಾರ್ಮಿಕರಿಂದ ದುಡ್ಡು ಕೀಳುತ್ತಾರೆ. ನನ್ನ ಮನವಿ ಏನೆಂದರೆ ಈ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುವ ಹೆಲ್ತ್ ಇನ್ಸ್‌ಪೆಕ್ಟರುಗಳು ಯಾರಿದ್ದಾರೆ ಅವರನ್ನು ಒಂದು ಜಾಗದಲ್ಲಿ ಮೂರು ವರ್ಷಗಳ ಮೇಲೆ ಇರಕೂಡದೆಂಬ ರೂಲ್ಸ್ ನಿಮ್ಮಲ್ಲಿದೆ. ನಗರಪಾಲಿಕೆಯಲ್ಲಿ ಶಂಚಿಯಾದ ಆಡಳಿತ ನಡೆಸಬೇಕು ಎಂಬದೃಷ್ಟಿಯಿಂದ ತಾವು ನಿರ್ದೇಶನಗಳನ್ನು ಕೊಡುತ್ತಿದ್ದೀರಿ. ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮೂರು ವರ್ಷಕ್ಕೆ ಮೇಲ್ಪಟ್ಟು ೬ವರ್ಷಕ್ಕೆ ಹತ್ತಿರ ಹತ್ತಿರ ಇದ್ದಿ ಟ್ರಾನ್ಸ್‌ಫರ್ ಆಗದೆ ಯಾರು ಕಾರ್ಮಿಕರ ಶೋಷಣೆ ಮಾಡುತ್ತಿದ್ದಾರೋ ಅಂಥವರನ್ನು ಆದಷ್ಟು ಬೇಗ ಎತ್ತಂಗಡಿ ಮಾಡಬೇಕು.

ಶ್ರೀ ಎಂ. ಚಂದ್ರಶೇಖರ್.— ಸಾಮಾನ್ಯವಾಗಿ ಎರವಲು ಸೇವೆಯ ಮೇಲೆ ಬಂದಿರುವವರು ಮೂರು ವರ್ಷ ಸೇವೆಯಲ್ಲಿರುತ್ತಾರೆ. ತದನಂತರ ಅವರ ಮೇಲೆ ದೂರು ಬಂದಾಗ ಮೂಲ ಇಲಾಖೆಗೆ ಕಳಿಸುವುದು ವಾಡಿಕೆ. ಇಲ್ಲದೇ ಹೋದರೆ ೫ ವರ್ಷದವರೆಗೂ ಅವರನ್ನು ಇಟ್ಟುಕೊಳ್ಳಬಹುದು. ಆ ಅವಧಿಯ ನಂತರ ಬಹುತೇಕ ಜನರು ಹೋಗುತ್ತಾರೆ. ಕೆಲವಾರು ಕಾರಣಗಳಿಂದ ಕೆಲವರು ಉಳಿದುಕೊಳ್ಳುವುದು ಉಂಟು. ಅಂಥವರು ಈಗಾಗಲೇ ೬ ಮಂದಿ ಮಾತ್ರ ಇದ್ದಾರೆ. ಅವರನ್ನೂ ಮೂಲ ಇಲಾಖೆಗಳಿಗೆ ಕಳಿಸಲು ತೀರ್ಮಾನ ಮಾಡಲಾಗಿದೆ.

ರಾಜ್ಯದಲ್ಲಿ ಅಂಗೀಕೃತವಾದ ಕ್ರೀಡಾ ಸಂಸ್ಥೆಗಳ ಹೆಸರು

೧೬೦೪. ಶ್ರೀ ಎ. ಬಿ. ದೇಸಾಯಿ (ಧಾರವಾಡ).—ಮಾನ್ಯ ಗಣಿ ವಂತ್ರ ಭೂ ವಿಜ್ಞಾನ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಅಂಗೀಕೃತ ಕ್ರೀಡಾ ಸಂಸ್ಥೆಗಳ ಹೆಸರು ?